OS No. 93/2018
DW-1

(ಇಂದು ದಿಃ 10-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು :- ಶ್ರೀ.NR ವಕೀಲರಿಂದ :-**

ದಾವಾ ಆಸ್ತಿಗಳು ವಾದಿಯ ತಂದೆಯ ಈರಪ್ಪ ಒಲ್ಲಬ್ಬ ರೆಡ್ಡಿ ರವರಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1ನೇಪ್ರತಿವಾದಿಗೆ ಬಂದಿವೆ ಎಂದು ಹೇಳುತ್ತಾರೆ. ದಾವಾ ಜಮೀನುಗಳು ಮೂಲತಃ ಈರಪ್ಪ ಒಲ್ಲಬ್ಬ ರೆಡ್ಡಿ ರವರ ಜಮೀನುಗಳು ಎಂದರೆ ಸರಿ. ಸದರಿ ಜಮೀನುಗಳಿಂದ ಬಂದ ಆದಾಯದಿಂದ ನಾನು ಮತ್ತು 3 ರಿಂದ 6ನೇ ಪ್ರತಿವಾದಿಯರು ನಮ್ಮ ಹೆಸರಿಗೆ ದಾವಾ ಐಟಂ ನಂಬರ 10 ರಿಂದ 12 ನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಕೊಡ್ಲಾ ನಿವಾಸಿಯಾಗಿದ್ದರು ಎಂದರೆ ಸರಿ. ಮೃತ ಬಸಲಿಂಗಮ್ಮಳ ಗಂಡ ಐಯಣ್ಣ ಕೂಡ ಕೊಡ್ಲಾ ದವರು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ಬೆನಕನಳ್ಳಿಯವರು ಎಂದು ಹೇಳುತ್ತಾರೆ. ಅವರ ಜಮೀನುಗಳು ಕೊಡ್ಲಾ ದಲ್ಲಿವೆ ಎಂದರೆ ಸರಿಯಲ್ಲ. ವಾದಿ ಮಹಾದೇವಮ್ಮ ಮೇಲಿಂದ ಮೇಲೇ ತವರಿಗೆ ಬಂದು ಹೋಗಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೀತಿ ಮಹಾದೇಮಮ್ಮ ಬಂದಿದ್ದಾಗ ನಾವು ಅವಳಿಗೆ ಬೆಳೆಗಳಲ್ಲಿ ಪಾಲು ಕೊಡುತ್ತಿದ್ದೆವು ಎಂದರೆ ಸರಿಯಲ್ಲ. ಕೆಲವು ವರ್ಷಗಳ ಕಾಲ ಜಮೀನು ಖರೀದಿ ಮಾಡುತ್ತಿದ್ದೆವೆ ಕಾರಣ ಪಾಲು ಕೊಡುವುದಿಲ್ಲ ಎಂದು ಹೇಳಿ ಪಾಲು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ 1 ವರ್ಷದ ಮುಂಚೆ ವಾದಿ ಮತ್ತು ನಮ್ಮ ನಡುವೆ ಜಗಳ ಬಂತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಮಹಾದೇವಮ್ಮ ರವರನ್ನು ನೋಡಿಲ್ಲ, ಅವಳು ಯಾವತ್ತು ಭಾಗ ಕೇಳಿಲ್ಲ ಮತ್ತು ಈರಪ್ಪ ಒಲ್ಲಬ್ಬ ರೆಡ್ಡಿ ರವರಿಗೆ ನನ್ನ ತಾಯಿ ಬಸಲಿಂಗಮ್ಮ ಒಬ್ಬಳೆ ಮಗಳು ಎಂದು ಹೇಳುತ್ತಾರೆ. ದಾವಾ ಐಟಂ ನಂಬರ 1 ರಿಂದ 9, 13 ಮತ್ತು 14 ಆಸ್ತಿಗಳೂ ದಾನ ಪತ್ರದ ಪ್ರಕಾರ ವರ್ಗಾವಣಿ ಆಗಿಲ್ಲ ಎಂದರೆ ಸರಿಯಲ್ಲ. ದಾನ ಪತ್ರದ ಮೂಲಕ ವರ್ಗಾವಣೆ ಆಗಿದೆ ಎಂದು ತೋರಿಸಲು ನಾನು ನೋಂದಾಯಿತ ದಾನ ಪತ್ರ ಹಾಜರುಪಡಿಸಿದ್ದೇನೆ . ಅದರಂತೆ ಆದ ಮುಟೇಷನ ಆಗಿದೆ ಎಂದು ತೋರಿಸಲು ಮುಟೇಷನ ಹಾಜರುಪಡಿಸಿಲ್ಲ. ದಾನ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾನ ಪತ್ರ ಯಾವತ್ತು ಜಾರಿಗೆ ಬಂದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಈರಪ್ಪ ಒಲ್ಲಬ್ಬ ರೆಡ್ಡಿ ಗ್ರಾಮದ ವಾಸಿಯಾಗಿದ್ದರಿಂದ 1ನೇಪ್ರತಿವಾದಿ ಹೆಸರಿಗೆ ನಾಮಕವಾಸ್ತೆ ಜಮೀನುಗಳನ್ನು ಮಾಡಲಾಗಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮಾರಾಟ ಮಾಡಿರುವ ಆಸ್ತಿಗಳನ್ನು ಮಾರಾಟಮಾಡಲು ಒಟ್ಟು ಕುಟುಂಬದಲ್ಲಿ ಕಾನೂನಾತ್ಮಕ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಜಮೀನುಗಳನ್ನು ಬೇರೆಯವರಿಂದ ಉಳುಮೆ ಬಿತ್ತನೆ ಮಾಡಿಸುತ್ತೆವೆ ಎಂದರೆ ಸರಿಯಲ್ಲ .ನಾವೇ ಆಳುಗಳ ಸಹಾಯದಿಂದ ಮಾಡುತ್ತೆವೆ ಎಂದು ಹೇಳುತ್ತಾರೆ . ನಾವು ಜಮೀನುಗಳನ್ನು

ಮೊದಲಿನಿಂದ ಬೆರೆಯವರಿಂದ ಮಾಡಡಿಸುತ್ತಿದ್ದ ಕಾರಣ ಬಸಲಿಂಗಮ್ಮ ಜಮೀನುಗಳನ್ನು ಮಾರಾಟಮಾಡಿರುವ ಸಂಗತಿ ವಾದಿಗೆ ತಕ್ಷಣಕ್ಕೆ ಗೊತ್ತಾಗಲಿಲ್ಲ ಎಂದರೆ ಸರಿಯಲ್ಲ. ಮಹಾದೇಮಮ್ಮ ದಾವೆ ಸಲ್ಲಿಸುವ ಸಂಗತಿ ಗೊತ್ತಾದ ನಂತರ ವಿಭಗ ಪತ್ರ ನೋಂದಣೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಐಟಂಂ ನಂಬರ 1 ರಿಂದ 9ಮಹಾದೇಮಮ್ಮಸ್ವಂತಸ್ವತ್ತುಗಳು ಆಗಿರುವ ಕಾರಣ ಅವುಗಳಲ್ಲಿ ನನಗೆ ಯಾವುದೇ ಹಕ್ಕು ಪಾಲು ಇಲ್ಲ ಎಂದರೆ ಸರಿಯಲ್ಲ. ಮಹಾದೇಮಮ್ಮ ಮತ್ತು ಬಸಲಿಂಗಮ್ಮಬದುಕಿರುವವರೆಗೆ ದಾವಾ ಐಟಂ ನಬಂರ 1ರಿಂದ 9ರಲ್ಲಿ ನಮಗೆ ಯಾವುದೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನಂಬಂಧ ನಾವು ನೋಂದಣೆ ಮಾಡಿಕೊಂಡಿರು ವಿಭಾಗಪತ್ರಕಾನೂನು ಬಾಹಿರ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಸಲುವಾಗಿ ಮಹಾದೇಮಮ ದಾಖಲಾತಿಗಳನ್ನು ಪಡೆದುಕೊಂಡಾಗಬಸಲಿಂಗಮ್ಮ ಕೆಲವು ದಾವಾ ಸ್ವತ್ತುಗಳನ್ನು ಮಾರಾಟಮಾಡಿರು ಸಂಗತಿ ಮೊದಲ ಬಾರಿ ಮಹಾದ ವೆಮ್ಮರಿಡಿಗೆ ಗೊತ್ತಾಯಿತಎಂದರೆ ಸರಿಯಲ್ಲ.

2018 ರಲ್ಲಿ ವಾದಿ ಭಾಗಕೊಡುವಂತೆ 1ನೇ ಪ್ರತಿವಾದಿಯನ್ನು ಕೊರಿಕೊಂಡಿದ್ದರು ಆದರೆ 1ನೇಪ್ರತಿವಾದಿ ಭಾಗ ಕೊಡದ ಕಾರಣ ಈ ದಾವೆ ಸಲ್ಲಿಸಬೇಕಾಯಿತು ಎಂದರೆ ಸರಿಯಲ್ಲ. ಈರಪ್ಪ ಒಲ್ಲಬರೆಡ್ಡಿ ಬಸಲಿಂಗಮ್ಮ ರವರಿಗೆ ದಾನ ಪತ್ರ ಮಾಡಿಕೊಟ್ಟು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾನ ಪತ್ರ ಸುಳ್ಳು ಇರು ವಕಾರಣ ಮೂಲ ಪ್ರತಿಯನ್ನು ಬಚ್ಚಿ ಟ್ಟು ದೃಢಿಕೃತ ನಕಲನ್ನು ಹಾಜರುಪಡಿಸಿದ್ದ್ವೇನೆ ಎಂದರೆ ಸರಿಯಲ್ಲ.

**(ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ವಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**